**<u>4ನೇ ಅಪರ ಮುಖ್ಯ ನ್ಯಾಯಿಕ ದಂಡಾಧಿಕಾರಿಯವರ ನ್ಯಾಯಾಲಯ ಬೆಂಗಳೂರು</u>**

**ಸಿಸಿ ನಂ. 20544/2017 ಚಾಸಾಃ 12 ಪ್ರಾಸಾಃ 8**

| | | |
|---|---|---|
| ಸಾಕ್ಷಿದಾರರ ಹೆಸರು | : | ಸತ್ಯನಾರಾಯಣ |
| ತಂದೆಯ ಹೆಸರು | : | ರಾಮಚಂದ್ರಶಾಸ್ತ್ರಿ |
| ವಯಸ್ಸು | : | 58 ವರ್ಷ |
| ವೃತ್ತಿ | : | ಅರ್ಚಕರು |
| ವಾಸ | : | ಬನಶಂಕರಿ, ಬೆಂಗಳೂರು |

**<u>ಸಾಕ್ಷಿಯನ್ನು ದಿಃ 01.10.2024 ರಂದು ಕರೆಯಿಸಿ ಪ್ರಮಾಣ ವಚನ ಬೋಧಿಸಲಾಯಿತು.</u>**

**<u>ಮುಖ್ಯವಿಚಾರಣೆ: ಪ್ರಾಜ್ಞಾ ಹಿ.ಸಾ.ಸ.ಅ ರವರಿಂದಃ-</u>**

ನಾನು 2005 ರಿಂದ 2022 ರವರೆಗೆ ಕನಕಪುರ ರಸ್ತೆಯಲ್ಲಿರುವ ಬನಶಂಕರಿ ದೇವಾಲಯದ ಪ್ರಧಾನ ಅರ್ಚಕನಾಗಿ ಕೆಲಸ ಮಾಡಿರುತ್ತೇನೆ. 1ನೇ ಮತ್ತು 2ನೇ ಆರೋಪಿತರು ಸದರಿ ದೇವಸ್ಥಾನದಲ್ಲಿ ಸಹಯಕ ಅರ್ಚಕರಾಗಿ ಕೆಲಸ ಮಾಡುತ್ತಿದ್ದರು. 2ನೇ ಆರೋಪಿಯು ತಾನು ಪತ್ರಕರ್ತ ಎಂದು ಜನರಿಗೆ ನಂಬಿಸಿ ಮೋಸ ಮಾಡುತ್ತಿದ್ದರು ಎಂಬ ವಿಚಾರ ನನ್ನ ಗಮನಕ್ಕೆ ಬಂದಿರುತ್ತದೆ. ಪತ್ರಕರ್ತ ಸಂಘದವರು 2ನೇ ಆರೋಪಿಯ ವಿರುದ್ದ ಆಪಾದನೆ ಮಾಡಿದ ಬಗ್ಗೆ ನನಗೆ ಗೊತ್ತಿಲ್ಲ. 2ನೇ ಆರೋಪಿಯು ಮನಸ್ಸು ಇಚ್ಚೆ ದೇವಸ್ಥಾನದ ಬಾಗಿಲನ್ನು ತೆಗೆಯುತ್ತಿದ್ದರು ಮತ್ತು ಮುಚ್ಚುತ್ತಿದ್ದರು ಎಂದರೆ ನನಗೆ ಗೊತ್ತಿಲ್ಲ. ಪಾದುಕೆ ಮತ್ತು ಕಿರೀಟ ಭಿನ್ನವಾಗಿದ್ದ ಸಂಬಂಧ ಸಭೆ ಮಾಡಲಾಗಿತ್ತು. ಸದರಿ ಸಭೆಯಲ್ಲಿ 2ನೇ ಆರೋಪಿಯನ್ನು ಪ್ರಶ್ನಿಸಿದಾಗ ಅವರು ತಾವು ಧರಿಸಿದ್ದ ಜನಿವಾರ ಮತ್ತು ರುದ್ರಾಕ್ಷಿ ಮಾಲೆಯನ್ನು ಕಿತ್ತು ಹಾಕಿ ಅರ್ಚಕರ ವೃತ್ತಿಗೆ ಅವಮಾನ ಮಾಡಿರುತ್ತಾರೆ.

ನಾನು ಘಟನೆ ನಡೆದ ಸಂದರ್ಭದಲ್ಲಿ ಆರೋಗ್ಯ ಸರಿಯಿಲ್ಲದ ಕಾರಣ ರಜೆ ಹಾಕಿದೆನು. ಆ ಸಮಯದಲ್ಲಿ 1 ಮತ್ತು 2ನೇ ಆರೋಪಿತರು ಬನಶಂಕರಿ ದೇವಿಯ ಪೂಜೆಯನ್ನು ಮಾಡುತ್ತಿದ್ದರು. ಆ ಸಮಯದಲ್ಲಿ ದೇವಿಯ ಪಾದುಕೆ ಮತ್ತು

ಕಿರೀಟದ ಚಿನ್ನವನ್ನು ಕತ್ತರಿಸಿರುವುದು ಕಂಡು ಬಂದಿರುತ್ತದೆ. ಆರೋಪಿಗಳ ನಡುವ ತಟ್ಟೆ ಕಾಸಿನ ವಿಚಾರದಲ್ಲಿ ಆಗಾಗ್ಗೆ ಜಗಳ ಆಗುತ್ತಿತ್ತು. ಪಾದುಕೆ ಮತ್ತು ಕಿರೀಟದಲ್ಲಿ 6.810 ಗ್ರಾಂ ಕಳವು ಮಾಡಿರುವುದು ಕಂಡು ಬಂದಿರುತ್ತದೆ. ಈ ಸಂಬಂಧ ಕಾರ್ಯನಿರ್ವಾಹಕ ಅಧಿಕಾರಿಗಳು ಮತ್ತು ಪೊಲೀಸರು ವಿಚಾರಣೆ ಮಾಡಿರುತ್ತಾರೆ.

**<u>ಪಾಟೀ ಸವಾಲುಃ 1ನೇ ಆರೋಪಿ ಪರ ಶ್ರೀ.ಕೆ.ಕೆ. ವಕೀಲರಿಂದಃ</u>**

ಆರೋಪಿತರ ಪರ ವಕೀಲರು ಪಾಟೀಸವಾಲಿಗೆ ಸಮಯಕೋರಿದ್ದು 500/- ರೂ ಖರ್ಚಿನೊಂದಿಗೆ ಸಮಯವಕಾಶ ನೀಡಲಾಯಿತು.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದಂತೆ ಗಣಕಯಂತ್ರದಲ್ಲಿ ಬೆರಳಚ್ಚು ಮಾಡಲಾಯ್ತು)

**ಓ.ಹೇ.ಕೇ.ಸ.ಇದೆ**

**4ನೇ ಎ.ಸಿ.ಜೆ.ಎಂ.ನ್ಯಾ.,**